# ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.

**ಎಸ್.ಸಿ. ಸಂಖ್ಯೆ 93/2021**

| | | |
|---|---|---|
| ಸಾಕ್ಷಿದಾರರ ಹೆಸರು | : ವೇದಮೂರ್ತಿ ಹೆಚ್ ಆರ್ | ಪಿಡಬ್ಲ್ಯೂ : 26 |
| ತಂದೆಯ / ಗಂಡನ ಹೆಸರು | : ಎನ್ ರುದ್ರಪ್ಪ | ಸಿಡಬ್ಲ್ಯೂ : 52 (ಹೆಚ್ಚುವರಿ ದೋಷಾರೋಪಣೆ ಪಟ್ಟಿಯಲ್ಲಿ) |
| ವಯಸ್ಸು | : 41 ವರ್ಷ | |
| ಉದ್ಯೋಗ | : ವೈಜ್ಞಾನಿಕ ಅಧಿಕಾರಿ , ನ್ಯಾಯ ವಿಜ್ಞಾನ ಪ್ರಯೋಗಾಲಯ , ಮಡಿವಾಳ , ಬೆಂಗಳೂರು | |
| ವಾಸಸ್ಥಳ | : ಬೆಂಗಳೂರು | |

**ಸಾಕ್ಷಿಯನ್ನು ಈ ದಿನ ದಿಃ 19.12.2024 ರಂದು ವಿಸಿ ಮೂಲಕ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ**

1. ನಾನು ಮಾರ್ಚ 2014 ರಿಂದ ನಾನು ಬೆಂಗಳೂರು , ಮಡಿವಾಳದ ನ್ಯಾಯ ವಿಜ್ಞಾನ ಪ್ರಯೋಗಾಲಯದ **Mobile Forensic Science Section** ನಲ್ಲಿ ವೈಜ್ಞಾನಿಕ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ನಾನು **M.Sc, in Computer Science and Diploma in Forensic Photography** ಮಾಡಿರುತ್ತೇನೆ. ನಾನು 3 ತಿಂಗಳ ಕಾಲ **Mobile Forensic Science** ಬಗ್ಗೆ ತಿರುವನಂತಪುರದಲ್ಲಿ ತರಬೇತಿಯನ್ನು ಪಡೆದಿರುತ್ತೇನೆ.

ಅಲ್ಲದೇ **Mobile Forensic Science** ಬಗ್ಗೆ **CBI Academy**, **Gaziyabad**, **Delhi** , ಯಲ್ಲಿ ತರಬೇತಿಯನ್ನು ಪಡೆದಿರುತ್ತೇನೆ. **NICFS**, **Delhi** ಯಲ್ಲಿ ಈ ಬಾಬ್ತು ತರಬೇತಿಯನ್ನು ಪಡೆದಿರುತ್ತೇನೆ. 900 ಕ್ಕೂ ಹೆಚ್ಚು ಪ್ರಕರಣಗಳಲ್ಲಿ ವಿಶ್ಲೇಷಣಾ ವರದಿಯನ್ನು ನೀಡಿರುತ್ತೇನೆ. ಹಾಗೂ 100 ಕ್ಕೂ ಹೆಚ್ಚು ಪ್ರಕರಣಗಳಲ್ಲಿ ಸಾಕ್ಷಿ ನುಡಿದಿರುತ್ತೇನೆ.

2. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ದಿಃ 05.01.2021 ರಂದು ಮೈಸೂರಿನ ನರಸಿಂಹರಾಜ ಪೋಲೀಸ್ ಠಾಣೆಯ ವಿಷ್ಣು ಕೆರೂರು 105 ಸಿಪಿಸಿ ರವರು ಒಂದು ಸೀಲಾದ ಮೊಬೈಲ್ ಫೋನ್ ನನ್ನು ನಮ್ಮ ಸ್ವೀಕೃತಿ ವಿಭಾಗಗಕ್ಕೆ ನೀಡಿರುತ್ತಾರೆ ಮತ್ತು ಅದೇ ಪ್ರಕರಣಕ್ಕೆ ಸಂಬಂಧಪಟ್ಟಂತೆ ಮತ್ತೂಂದು ಸೀಲಾದ ಮೊಬೈಲ್ ಫೋನ್ ನ್ನು ಸಹ ದಿಃ 10.03.2021 ರಂದು ಸದರಿಯವರು ಸ್ವೀಕೃತಿ ವಿಭಾಗಕ್ಕೆ ನೀಡಿರುತ್ತಾರೆ. ಅದೇ ದಿನ ಅವುಗಳನ್ನು ನಮ್ಮ ವಿಭಾಗದಲ್ಲಿ ವಿಭಾಗದ ಮುಖ್ಯಸ್ಥರು ಸ್ವೀಕರಿಸಿರುತ್ತಾರೆ.

3. ನಂತರ ದಿಃ 06.09.2021 ರಂದು ಈ ಪ್ರಕರಣದಲ್ಲಿ ಪಡೆದ ವಸ್ತುಗಳ ವಿಶ್ಲೇಷಣೆಯ ವರದಿಯನ್ನು ನೀಡಲು ವಿಭಾಗದ ಮುಖ್ಯಸ್ಥರು ನನಗೆ ವಹಿಸಿರುತ್ತಾರೆ. ಅದರಂತೆ ನಾನು ಪ್ರಕರಣದ ಕಡತ ಮತ್ತು ವಸ್ತುಗಳನ್ನು ಸ್ವೀಕರಿಸಿ ಅವುಗಳನ್ನು **preliminary examination** ಗಾಗಿ ತೆಗೆದುಕೊಂಡಿರುತ್ತೇನೆ. ಅದರಂತೆ ವಸ್ತುಗಳ ಮೇಲೆ ಇದ್ದಂತಹ ಮೊಹರುಗಳು ಮತ್ತು ಮಾದರಿ ಮೊಹರಿನೊಂದಿಗೆ ತಾಳೆಯಾಗುತ್ತಿದ್ದವು ಹಾಗೂ ವಸ್ತುವಿನ ವಿವರಣೆ **invoice** ನಲ್ಲಿ ಇದ್ದ ಹಾಗೆಯೇ ಇದ್ದವು.

4. ಮೊದಲನೆಯ ವಸ್ತು (**Article**) ನ್ನು ತೆರೆದು ನೋಡಲಾಗಿ ಅದರಲ್ಲಿ ವಿವೋ ಮೊಬೈಲ್ ಕಂಪನಿಯ ಫೋನ್ ಇದ್ದು ಅದರ ಮೊಡೆಲ್ ನಂ. **VIVO 1603** ಆಗಿರುತ್ತದೆ. ಹಾಗೂ ಅದರ **IMEI No**.1-- 863599032587997 ಹಾಗೂ ಅದರ ಇನ್ನೊಂದು **IMEI No**.2-863599032587989 ಆಗಿತ್ತು. ಅದರಲ್ಲಿ ಒಂದು ಏರ್ ಟೆಲ್ ಸಿಮ್ ಕಾರ್ಡ ಇದ್ದು ಅದರ ನಂ. 8991000902639344950 (**MFS** /7/2021) ಆಗಿತ್ತು. ಇವುಗಳಲ್ಲಿ **VIVO** ಮೊಬೈಲ್ ನ್ನು ನಾನು ಡಿ-1(ಎ) ಎಂತಲು ಹಾಗುಾ ಏರ್ ಟೆಲ್ ಸಿಮ್ ಕಾರ್ಡ ನ್ನು ಡಿ1(ಬಿ) ಎಂದು ಗುರುತಿಸಿಕೊಂಡಿರುತ್ತೇನೆ.

5. 2 ನೇ ವಸ್ತುವನ್ನು ತೆರೆದು ನೋಡಲಾಗಿ , ಅದರಲ್ಲಿ ಸ್ಯಾಮ್ ಸಂಗ್ ಮೊಬೈಲ್ ಪೋನ್ ಮಾಡೆಲ್ ನಂ. **SM-A**217**F/DS** ಇದ್ದು , ಅದರ **IMEI No**.1-355368113068250 ಹಾಗೂ ಇನ್ನೊಂದು **IMEI No**.2-355368113068258 ಆಗಿದ್ದು , ಅದರಲ್ಲಿ ಜಿಯೊೀ ಸಿಮ್ ಕಾರ್ಡ ಇದ್ದು ಅದರ ನಂ. 8991861040039471535 (**MFS**/242/2021) ಆಗಿತ್ತು. ನಾನು ಸ್ಯಾಮ್ ಸಂಗ್ ಮೊಬೈಲ್ ಪೋನ್ ನ್ನು ಡಿ2(ಎ) ಎಂತಲು, ಜಿಯೋ ಸಿಮ್ ಕಾರ್ಡ ನ್ನು ಡಿ2(ಬಿ) ಎಂದು ಗುರುತುಪಡಿಸಿಕೊಂಡಿರುತ್ತೇನೆ.

6. ಮೇಲೆ ಹೆಸರಿಸಲಾದ ಎಲ್ಲಾ ವಸ್ತುಗಳನ್ನು ವೈಜ್ಞಾನಿಕ ವಿಶ್ಲೇಷಣೆಗ ಒಳಪಡಿಸಲು **Cellebrite UFED**4**PC version** 7.470.247 ಮತ್ತು ಅದರಲ್ಲಿರುವ ಡಾಟಾವನ್ನು ವಿಶ್ಲೇಷಿಸಲು **UFED physical Analyzer version** 7.47.0.49 ನ್ನು ಉಪಯೋಗಿಸಿರುತ್ತೇನೆ.

7. **Note**: **The Samsung mobile phone marked as D2a was supported only for partial data extraction**.

**The VIVO mobile phone marked as D1a, Airtel SIM card marked as D1b, Samsung mobile phone marked as D2a and Jio SIM card marked as D2b were carefully, thoroughly, forensically looked for WhatsAPP installed application and WhatsApp Chats between the mobile numbers** 9972994028 **and** 8660343740 **period** 14.12.2020 **and** 15.12.2020. **The alleged images namely** 1. **IMG**-20201215-**WA**0001.**jpg** 2. **IMG**-20201215-**WA**0002.**jpg** 3. **IMG**-20201215-**WA**0003.**jpg sent/received details, genuinity of the images and comparison of the same images with respect to images present in Samsung mobile phone marked as D2a. The forensic system generated details enclosed in a softcopy as Annexure-A1a, A1b and A.1c (In a CD bearing**

**number HN**130**JAA**70121516 **and its MD**5 **hash value is bodc**98**a**20**daebb**86**e**782**af**606641**c**03**f**)

**RESULT OF EXAMINATION**.

1. **The VIVO mobile phone marked as D**1**a contains WhatsApp application and user account details**. **The respective details are enclosed in a soft copy as Annexure**-**A**1**a**.

2. **The Vivo mobile phone marked as D**1**a does not received photos and messages from mobile number** 8660343740 **on** 14.12.2020.

3. **The Vivo mobile phone marked as D**1**a received photos and messages from mobile number** 8660343740 **on** 15.12.2020. **The respective details are enclosed in a soft copy as Annexure**-**A**1**b**.

4. **The vivo mobile phone marked as D**1**a contains alleged images namely IMG**-20201215-**WA**0001.**jpg**, **IMG**-20201215-**WA**0002.**jpg and IMG**-20201215-**WA**0003.**jpg**. **The respective**

**details are enclosed in a soft copy as Annexure-A1c. Further, above said images does not contain photo captured details. Hence, no opinion is expressed regarding genuinity of the images.**

5. **The Airtel SIM Card marked as D1b does not contains images and WhatsApp data.**

6. **The samsung mobile phone marked as D2a does not contain WhatsApp application. Hence, no opinion is expressed regarding shared details of the alleged WhatsApp chat and photos (Annexure-A1b) present in Vivo mobile phone marked as D1a.**

7. **The samsung mobile phone marked as D2a does not contain alleged images namely IMG-20201215-WA0001.jpg, IMG-20201215-WA0002.jpg and IMG-20201215-WA0003.jpg. Hence, comparision of the alleged images of**

**Vivo mobile phone marked as D1a is not possible**.

8. **The Jio SIM card marked as D2b does not contain images and WhatsApp data**.

**8.** ನಂತರ ನನ್ನ ವರದಿಗೆ ನಾನು ಸಹಿ ಹಾಕಿ ನಮ್ಮ ನಿರ್ದೇಶಕರ ಸಹಿಯನ್ನೂ ಸಹ ಪಡೆದು ಕಳುಹಿಸಿದ್ದಂತಹ ವಸ್ತುಗಳನ್ನು ಪುನಃ ಮೊಹರು ಮಾಡಿ ಸಂಬಂಧಪಟ್ಟ ಪೋಲೀಸ್ ಠಾಣೆಗೆ ವರದಿಯೊಂದಿಗೆ ಕಳುಹಿಸಿಕೊಟ್ಟಿರುತ್ತೇನೆ. ವೈಜ್ಞಾನಿಕ ವಿಶ್ಲೇಷಣೆಯಿಂದ ಬಂದಂತಹ ಫಲಿತಾಂಶವನ್ನು ಸಿಡಿ ಗೆ ಅಳವಡಿಸಿ ಅದನ್ನು ಸಹ ಮಾದರಿ ಮೊಹರಿನೊಂದಿಗೆ ಕಳುಹಿಸಿಕೊಟ್ಟಿರುತ್ತೇನೆ. ನಾನು ಕಳುಹಿಸಿಕೊಟ್ಟ ಸಿಡಿ ಯ Hash value ನ್ನು ನನ್ನ ವರದಿಯಲ್ಲಿ ನಮೂದಿಸಿರುತ್ತೇನೆ. ನಾನು ನೀಡಿದ ವರದಿಯನ್ನು ಈಗ ನೋಡುತ್ತಿದ್ದೇನೆ. ಅದರ ಮೇಲೆ ನನ್ನ ಸಹಿ ಇರುತ್ತದೆ. ಸದರಿ ವರದಿಯನ್ನು ನಿಪಿ 65 ಎಂತಲು ಅದರ ಮೇಲೆ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ 65(ಎ) ಎಂತಲು ಗುರುತುಪಡಿಸಿಕೊಳ್ಳಲಾಯಿತು. ಸಾಕ್ಷಿ ಗುರುತಿಸಿದ ಮಾದರಿ ಮೊಹರನ್ನು ನಿಪಿ 66 ಎಂತಲು, ಅದರ ಮೇಲೆ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ 66(ಎ) ಎಂತಲು ಗುರುತುಪಡಿಸಿಕೊಳ್ಳಲಾಯಿತು. ಸಾಕ್ಷಿ ಗುರುತಿಸಿದ ಸಿಡಿ ಯನ್ನು ನಿಪಿ 67 ಎಂದು ಗುರುತುಪಡಿಸಿಕೊಳ್ಳಲಾಯಿತು. ಸಾಕ್ಷಿ ಎರಡು ಮೊಬೈಲ್ ಗಳನ್ನು ನೋಡಿ ಗುರುತಿಸಿ ಅವುಗಳ ಹಿಂಭಾಗದಲ್ಲಿ ಇದ್ದಂತಹ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಮೊಬೈಲ್ ಗಳನ್ನು ಈಗಾಗಲೇ ಎಂ ಒ 11 ಮತ್ತು 12 ಎಂದು ಗುರುತುಪಡಿಸಿಕೊಳ್ಳಲಾಗಿದೆ.

**9.** ತನಿಖಾಧಿಕಾರಿಯವರು ತಮ್ಮ ಪತ್ರದಲ್ಲಿ 9972994028 ಮತ್ತು 8660343740 ನಡುವೆ ದಿಃ 14.12.2020 ಮತ್ತು 15.12.2020 ರಂದು ನಡೆದಿರುವ ವ್ಯಾಟ್ಸ್ ಅಪ್ ಚ್ಯಾಟ್ ಮತ್ತು ಕಳುಹಿಸಿರುವ ಪೋಟೋಗಳ ಬಗ್ಗೆ ವೈಜ್ಞಾನಿಕ ವಿಶ್ಲೇಷಣೆಯನ್ನು ಕೇಳಿದ್ದರು.

**10.** ವಿವ್ರೋ ಮೊಬೈಲ್ ನಲ್ಲಿ 9972994028 ನಂಬರ್ ಇತ್ತು. ಈ ನಂಬರ್ ಗೆ ಮೊಬೈಲ್ ನಂಬರ್ 8660343740 ನಿಂದ ವ್ಯಾಟ್ಸ್ ಅಪ್ ಚ್ಯಾಟ್ ಮತ್ತು ಇಮೇಜಸ್ ಗಳು ಬಂದಿತ್ತು. ಅದನ್ನು Annexure–A1(b) ಎಂದು ಗುರುತಿಸಲಾಗಿದೆ.

**11.** ಆ ಸಿಡಿಯನ್ನು ಪ್ಲೇ ಮಾಡಿದಲ್ಲಿ ಅದನ್ನು ಗುರುತಿಸುತ್ತೇನೆ. ತೆರೆದ ನ್ಯಾಯಾಲಯದಲ್ಲಿ ಸಿಡಿಯನ್ನು ಡಿವಿಡಿಗೆ ಅಳವಡಿಸಿ ತೋರಿಸಲಾಗಿ ಅದರಲ್ಲಿದ್ದ A1(a), A.1(b) , A.1(c) ಯಲ್ಲಿನ ಮೆಸೇಜ್ ಮತ್ತು ಪೋಟೋಗಳನ್ನು ನೋಡಿ ಗುರುತಿಸಿರುತ್ತಾರೆ.

<u>ಪಾಟೀ ಸವಾಲುಃ ಆರೋಪಿ ಪರ ವಕೀಲರು ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.</u>

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸ ಇ ಎ ಒ**

**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು**
**ಮೈಸೂರು.**

Co–coordinator Pradeep Kumar present.